SRI R. ROSHAN BAIG.—The Director of Technical Education, some time 2-3 years back, immediately after taking charge, the first thing he did was to issue a Circular to all Colleges ಯಾರ್ಯಾರು ಮುಸ್ಲಿಂಸ್ ದರ್ಜೆಶಿ ಎಂದು ಸರ್ಟಿಫಿಕೇಟ್ ಏನು ತೆಗೆದುಕೊಂಡಿದ್ದಾರೆ ಆವರನ್ನು ಮನೆಗೆ ಕಳುಹಿಸಿ ಎಂದು ಮಾಡಿದ್ದಾರೆ. He is a most communal man, Why you are shielding such Officials in your department ?

ಶ್ರೀ ಹೆಚ್. ಜಿ. ಗೋವಿಂದೇ ಗೌಡ.—ಅವರು ಕಮ್ಯೂನಲ್ ಮ್ಯಾನ್ ಅಂತ ಹೇಳಿದ್ದಾರೆ. ಅದು ನನಗೆ ಗೊತ್ತಿಲ್ಲ.

SRI R. ROSHAN BAIG.—The first letter he had written was this.

ಶ್ರೀ ಬಿ. ರಾಚಯ್ಯ.—ದರ್ಜೇಷಿ ಅಂತ ಯಾರ್ಯಾರು ಸರ್ಟಿಫಿಕೇಟ್ ಅನ್ನು ಪ್ರೊಡ್ಯೂಸ್ ಮಾಡಿದರು, ಆ ಜಾತಿಯ ಹೆಸರನ್ನು ಉಪಯೋಗಿಸಿಕೊಂಡು ಸತ್ಯಕ್ಕೆ ದೂರವಾದಂಥ ಸರ್ಟಿಫಿಕೇಟ್ ಏನು ಕೊಟ್ಟಿದ್ದಾರೆ ಅದನ್ನು ವಿಚಾರಣೆ ಮಾಡಿ ಯಾರು ಆ ಜಾತಿಗೆ ಸೇರದೇ ಇದ್ದವರು ಇದ್ದಾರೆ, ಅಂಥವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆ. ನಾನು ಹಿಂದೆ ಮಂತ್ರಿಯಾಗಿದ್ದಾಗಲೂ ಇದೇ ಮಾತನ್ನು ಹೇಳಿದ್ದೇನೆ. ಯಾರ್ಯಾರು ಇದರ ಬಗ್ಗೆ ಸಂಳ್ಳು ಸರ್ಟಿಫಿಕೇಟ್ ಕೊಟ್ಟಿದ್ದಾರೆ ಹೈಕೋರ್ಟಿನ ರೂಲಿಂಗ್ ಪ್ರಕಾರ ಅದನ್ನು ವಿಚಾರಣೆ ಮಾಡಿ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆ. ನನಗೆ ಈ ಬಗ್ಗೆ ನೋಟೀಸ್ ಬಂದಿದ್ದರಿಂದ, ಈ ವಿಚಾರ ಗೊತ್ತಾದ್ದರಿಂದ ಅದಕ್ಕೆ ಉತ್ತರ ಕೊಡುತ್ತಿದ್ದೇನೆ.

SRI R. ROSHAN BAIG.—I am not satisfied with the reply of the Honble Minister.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಮೂಲೂರಿನಲ್ಲಿ ಪ್ರಥಮ ದರ್ಜೆ ಮಹಾ ವಿದ್ಯಾಲಯದ ಪ್ರಾರಂಭ

೧೬೧೦. ಶ್ರೀ ಹೆಚ್ ಬಿ. ದ್ಯಾವೇರಪ್ಪ (ಮಾಲೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಮಾಲೂರು ಪಟ್ಟಣದಲ್ಲಿ ಪ್ರಥಮ ದರ್ಜೆ ಕಾಲೇಜಿಗೆ ಬೇಡಿಕೆಗಳಿವೆಯೇ, ಹಾಗಿದ್ದರೆ ಪ್ರಥಮ ದರ್ಜೆ ಕಾಲೇಜು ಸ್ಥಾಪಿಸಲು ಸರ್ಕಾರವು ಮಂಜೂರಾತಿ ನೀಡುವುದೇ,

(ಆ) ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸಲು ಕಟ್ಟಡ ನಿರ್ಮಾಣ ಕೈಗೊಳ್ಳಲು ಸಾರ್ವಜನಿಕರು ಮುಂದೆ ಬಂದಿರುವುದನ್ನು ಸರ್ಕಾರವು ಗಮನಿಸಿದೆಯೇ ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

(ಅ) ಪ್ರಥಮ ದರ್ಜೆ ಕಾಲೇಜಿಗೆ ಬೇಡಿಕೆ ಇದೆ. ಇದರ ಬಗ್ಗೆ ಇನ್ನೂ ನಿರ್ಧಾರ ಕೈಗೊಂಡಿಲ್ಲ,

(ಆ) ಹಾಗೆ ಯಾವ ವರದಿಯೂ ಮುಟ್ಟಿಲ್ಲ.

ಮೂಲ ಧನ ಶುಲ್ಕ ರದ್ದತಿ

೧೬೧೮. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳಲ್ಲಿ ವ್ಯಕ್ತಿ ಶುಲ್ಕವನ್ನು ರದ್ದು ಮಾಡುವುದಾಗಿ ಸರ್ಕಾರದವರು ಭರವಸೆ ಇತ್ತಿಲ್ಲವೇ ?

(ಆ) ಈ ಭರವಸೆಗನುಗುಣವಾಗಿ ಎಷ್ಟು ಮತ್ತು ಯಾವ ಯಾವ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳಲ್ಲಿ ವ್ಯಕ್ತಿ ಶುಲ್ಕ ರದ್ದಾಗಿದೆ. ವಿವರಗಳನ್ನು ಸಂಸ್ಥೆಯ ಹೆಸರನ್ನು ಸೇರಿಸಿ ಕೊಡುವುದು ?

ಶ್ರೀ ಎಂ. ರಘುಪತಿ (ವಿದ್ಯಾ ಮಂತ್ರಿಯವರು).—

(ಅ) ಹೌದು. ಆದಕ್ಕನುಗುಣವಾಗಿ ಕರ್ನಾಟಕ ವಿದ್ಯಾ ಸಂಸ್ಥೆಗಳ (ಕ್ಯಾಪಿಟೇಶನ್ ಶುಲ್ಕ ರದ್ದತಿ) ಕಾಯಿದೆ ೧೯೮೪ನ್ನು ಜಾರಿಗೊಳಿಸಲಾಗಿದೆ.

(ಆ) ರಾಜ್ಯದ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕ್ಯಾಪಿಟೇಶನ್ ಶುಲ್ಕ ಪೂರ್ತಿ ರದ್ದಾಗಿಲ್ಲ. ಕಾಯಿದೆಯ ಪ್ರಕಾರ ಹಂತ ಹಂತವಾಗಿ ಐದು ವರ್ಷಗಳಲ್ಲಿ ಕ್ಯಾಪಿಟೇಶನ್ ಶುಲ್ಕವನ್ನು ರದ್ದು ಮಾಡಲಾಗುವುದು. ೧೯೮೪-೮೫ ಮತ್ತು ೧೯೮೫-೮೬ನೇ ಶೈಕ್ಷಣಿಕ ವರ್ಷದಲ್ಲಿ ಉಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಖಾಸಗೀ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಶೇಕಡಾ ೪೦ ರಷ್ಟು ಸ್ಥಾನಗಳನ್ನು ಸರ್ಕಾರವೇ ಪ್ರತಿಭೆ ಮತ್ತು ವೀಸಲಾತಿಯ ಮೇರೆಗೆ ತುಂಬಿದೆ, ಈ ಶೇಕಡಾ ೪೦ ರಷ್ಟು ಸ್ಥಾನಗಳಿಗೆ ಕ್ಯಾಪಿಟೇಶನ್ ಶುಲ್ಕ ಇಲ್ಲ ಉಳಿದ ಶೇಕಡಾ ೬೦ ರಷ್ಟು ಸ್ಥಾನಗಳಿಗೆ ಉಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಆಡಳಿತ ಮಂಡಲಿ ಕ್ಯಾಪಿಟೇಶನ್ ಶುಲ್ಕ ತೆಗೆದುಕೊಳ್ಳಬಹುದು ಈ ನಿಬಂಧನೆ ಅಲ್ಪ ಸಂಖ್ಯಾತರ ಕಾಲೇಜುಗಳಿಗೆ ಅನ್ವಯಿಸುವುದಿಲ್ಲ.

ಹಾವೇರಿಯಲ್ಲಿರುವ ಪ್ರಾಥಮಿಕ ಶಾಲೆಗೆ ಅಗತ್ಯವಿರುವ ಕೊಠಡಿಗಳನ್ನು ಒದಗಿಸುವುದು

೧೮೪೮. ಶ್ರೀ ಸಿ. ಸಿ. ಪಾಟೀಲ (ಹಾವೇರಿ).—ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಹಾವೇರಿ ಪುರಸಭಾ ಸರಹದ್ದಿನಲ್ಲಿ ಬರುವ ಪ್ರಾಥಮಿಕ ಶಾಲೆಗಳ ಅವಶ್ಯಕತೆಯ ಕೊಠಡಿಗಳನ್ನು ಒದಗಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

(ಆ) ಅನೇಕ ಶಾಲಾ ಕೊಠಡಿಗಳು ಬೀಳುವ ಪರಿಸ್ಥಿತಿಯಲ್ಲಿರುವುದರಿಂದ ಆ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ.

(ಇ) ತಾಲ್ಲೂಕಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆಯ ಅನುಗುಣವಾಗಿ ಇನ್ನು ಅನೇಕ ಶಾಲೆಗಳಲ್ಲಿ ಶಿಕ್ಷಕರಿಲ್ಲದಿರುವುದರಿಂದ ಅದರ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

(ಅ) ಮತ್ತು (ಆ) ೧೯೮೬-೮೭ರಲ್ಲಿ ಅಧಿಕ ಕೊಠಡಿಗಳನ್ನು ನಿರ್ಮಿಸಲು ಹಣ ಒದಗಿಸಲಾಗುವುದು.

(ಇ) ತಾಲ್ಲೂಕಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಗನುಗುಣವಾಗಿ ಹೆಚ್ಚಿನ ಶಿಕ್ಷಕರ ಅವಶ್ಯಕತೆಯಿದ್ದು ೧೯೮೬-೮೭ರಲ್ಲಿ ಅಧಿಕ ಶಿಕ್ಷಕರ ಹುದ್ದೆಗಳು ಮಂಜೂರಾಗುವುದಿದ್ದು, ಈ ತಾಲ್ಲೂಕಿನ ಅವಶ್ಯಕತೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಪೂರೈಸಲಾಗುವುದು.

ಇಂಜಿನಿಯರಿಂಗ್ ಸೀಟುಗಳನ್ನು ನಿಗದಿಪಡಿಸುವುದು

೧೦೨೨. ಶ್ರೀಮತಿ ಲೀಲಾವತಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಪ್ರತಿ ಒಂದು ಸರಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರತಿ ಒಂದು ಜಾತಿಗೆ ಹಂಚಲಾದ ಸೀಟುಗಳ ಸಂಖ್ಯೆ ಎಷ್ಟು (ಕಳೆದ ೩ ವರ್ಷಗಳಿಗೆ ಕಾಲೇಜುವಾರು ಮಾಹಿತಿಯನ್ನು ಒದಗಿಸುವುದು)

ಶ್ರೀ ಎಂ. ರಘಪತಿ (ಶಿಕ್ಷಣ ಸಚಿವರು)

(ಅ) ಪಂಗಡವಾರು ಅಂಕಿ ಸಂಖ್ಯೆಗಳನ್ನು ಅನುಬಂಧದಲ್ಲಿ ಇರುವಂತೆ ಲಗತ್ತಿಸಿದೆ. ಜಾತಿವಾರು ಪ್ರವೇಶದ ಮಾಹಿತಿಯು ಇಟ್ಟುಕೊಂಡಿರುವುದಿಲ್ಲ.—